**OS.No. 114/2022**
**ಪಿಡಬ್ಲ್ಯೂ: 2**

**ದಿಃ 15-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ ಎಚ್ ಎ ಪ್ರತಿವಾದಿ ಪರ ವಕೀಲರಿಂದ**

ನಾನು ಬಿಇ ಸಿವಿಲ್ ವ್ಯಾಸಂಗ ಮಾಡಿದ್ದೇನೆ. ನಾನು 2013 ರಿಂದ ಸರ್ವೆಯರ್ ಅಂತ ಕೆಲಸ ಮಾಡುತ್ತಿದ್ದೇನೆ. ನಾನು ಕೋಲಾರ ಮತ್ತು ಚನ್ನಗಿರಿಯಲ್ಲಿ ತಲಾ ನಾಲ್ಕು ವರ್ಷ ಕೆಲಸ ಮಾಡಿದ್ದೇನೆ. ಆನ್ ಲೈನ್ ಮೂಲಕ ಸಲ್ಲಿಸಿದ ಅರ್ಜಿಯನ್ನು ಸಲ್ಲಿಸಿದ್ದೇನೆ. ಹದ್ದುಬಸ್ತು ಮಾಡಲು ಅರ್ಜಿ ಸಲ್ಲಿಸಿದ್ದರು. ಆನ್ ಲೈನ್ ಮೂಲಕ ಸಲ್ಲಿಸಿದ ಅರ್ಜಿಯೊಂದಿಗೆ ಪಹಣಿ ಪತ್ರಿಕೆ ಮತ್ತು ಐಡಿ ಕಾರ್ಡ್ ದಾಖಲೆ ಸಲ್ಲಿಸಿದ್ದರು. ಸದರಿ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ನೀಡಿರಲಿಲ್ಲ. ಅರ್ಜಿದಾರರು ಈ ಮುಂಚೆ ದಾವಾ ಆಸ್ತಿಯನ್ನು ಅಳತೆ ಮಾಡಿಸಿದ ಬಗ್ಗೆ ದಾಖಲೆಯನ್ನು ನೀಡಿರಲಿಲ್ಲ. ನಾನು ಅಳತೆ ಮಾಡಿದ ಜಮೀನಿನ ಖರೀದಿ ಪತ್ರದ ದಾಖಲೆ ನೋಡಿರಲಿಲ್ಲ. ಜಮೀನನ್ನು ಅಳತೆ ಮಾಡುವುದಕ್ಕೂ ಮುಂಚೆ ಸದರಿ ಜಮೀನಿನ ಅಕ್ಕ ಪಕ್ಕದ ಜಮೀನುಗಳ ಮಾಲೀಕರಿಗೆ ಮುಂಚಿತ ನೋಟೀಸ್ ಜಾರಿ ಮಾಡಿ ವಿಷಯ ತಿಳಿಸಬೇಕು ಎಂದರೆ ಸರಿ. ದಾವಾ ಆಸ್ತಿಯನ್ನು ಅಳತೆ ಮಾಡುವುದಕ್ಕೂ ಮುಂಚೆ ದಾವಾ ಆಸಿತಯ ಅಕ್ಕಪಕ್ಕದ ಇಬ್ಬರು ಜಮೀನುಗಳ ಮಾಲೀಕರುಗಳಿಗೆ ನೋಟೀಸ್ ಜಾರಿ ಮಾಡಿದ್ದೆ. ಆ ಬಗ್ಗೆ ಪ್ರತಿವಾದಿಗೆ ನನ್ನ ಸಹೋದ್ಯೋಗಿ ಚಂದ್ರು ಎಂಬುವವರು ನೋಟೀಸ್ ಜಾರಿ ಮಾಡಿದ್ದರು. ನಿಪಿ 4 ರ ನೋಟೀಸ್ ಪ್ರತಿವಾದಿಗೆ ಖುದ್ದಾಗಿ ಜಾರಿಯಾಗಿಲ್ಲ ಎಂದರೆ ಸರಿ. ಸಾಕ್ಷಿ ಪ್ರತಿವಾದಿಯ ಮಗನಿಗೆ ಜಾರಿ ಮಾಡಿದ್ದಾಗಿ ನುಡಿಯುತ್ತಾರೆ. ನಿಪಿ 4 ರಲ್ಲಿ ಪ್ರತಿವಾದಿ ಸಿಗದೇ ಇದ್ದ ಕಾರಣ ಪ್ರತಿವಾದಿಯ ಮಗನಿಗೆ ನೋಟೀಸ್ ಜಾರಿ ಮಾಡಿದ್ದ ಬಗ್ಗೆ ಟಿಪ್ಪಣಿ ಇಲ್ಲ. ವಾದಿ ಮತ್ತು ತೀರ್ಥಪ್ಪ ಹೊರತುಪಡಿಸಿ ನಿಪಿ 4 ನ್ನು ಬೇರೆ ಯಾರಿಗೂ ಜಾರಿ ಮಾಡಿಲ್ಲ. ತಿರ್ಥಪ್ಪ ಎಂಬುವವರು ಆಸ್ತಿಯ ಸ್ವಾಧೀನದಾರರು ಅಲ್ಲ ಮತ್ತು ಮಾಲೀಕರು ಅಲ್ಲ ಆದಾಗ್ಯೂ ವಾದಿ ಹೇಳಿದಂತೆ ನಿಪಿ 4 ರ ದಾಖಲೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 4 ರ ನೋಟೀಸ್ ಪ್ರತಿವಾದಿಗೆ ಖುದ್ದಾಗಿ ಜಾರಿಯಾಗದೇ ಇದ್ದ ಕಾರಣ ಪ್ರತಿವಾದಿಗೆ ನಿಪಿ 4 ನೋಟೀಸ್ ಆರ್ ಪಿ ಎ ಡಿ ಮೂಲಕ ಜಾರಿ ಮಾಡಿಲ್ಲ. ನಿಪಿ 4 ನ್ನು ಆರ್ ಪಿ ಎ ಡಿ ಮೂಲಕ ಪ್ರತಿವಾದಿಗೆ ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ.

ಸರ್ವೆ ನಂ 87 ರ ಆಸ್ತಿಯು ಒಟ್ಟು 4 ಪೋಡುಗಳಾಗಿವೆ. ಸರ್ವೆ ನಂ 87 ರ ಒಟ್ಟು

ಕ್ಷೇತ್ರವನ್ನು ನಾನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ಸರ್ವೆ ನಂ 87 ರ ಒಟ್ಟು ಪೋಡುಗಳ ಕ್ಷೇತ್ರ ನಮೂದು ಮಾಡಿಲ್ಲ ಎಂದರೆ ಸರಿ. ಬೆಳಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಾನು ದಾವಾ ಆಸ್ತಿಯನ್ನು ಅಳತೆ ಮಾಡಿದ್ದೇನೆ. ಅಳತೆ ಮಾಡುವ ಕಾಲಕ್ಕೆ ಸ್ಥಳದಲ್ಲಿ ಅಳತೆ ಮಾಡಿದ ಬಗ್ಗೆ ಕಚ್ಚಾ ಟಿಪ್ಪಣಿ ತಯಾರಿಸಿಕೊಂಡಿದ್ದೆ. ದಾವಾ ಆಸ್ತಿಯನ್ನು ಅಳತೆ ಮಾಡಲು ಅರ್ಜಿ ನೀಡಿದ ಅರ್ಜಿದಾರರ ತಮ್ಮ ಜಮೀನನ್ನು ಯಾವ ದಿಕ್ಕಿನ ಬಾಜುದಾರರು ಎಷ್ಟು ಕ್ಷೇತ್ರ ಒತ್ತುವರಿ ಮಾಡಿದ್ದಾರೆ ಎಂಬ ವಿವರ ನಮಗೆ ತಿಳಿಸಿರಲಿಲ್ಲ. ಅಳತೆ ಮಾಡಲು ಅರ್ಜಿ ಸಲ್ಲಿಸಿದವರ ಜಮೀನನ್ನು ಮಾತ್ರ ನಾನು ಅಳತೆ ಮಾಡುತ್ತೇನೆ. ನಿಪಿ 5 ರಂತೆ ಜಮೀನು ಅಳತೆ ಮಾಡುವ ಕಾಲಕ್ಕೆ ಪ್ರತಿವಾದಿಯ ಜಮೀನನ್ನು ಅಳತೆ ಮಾಡಿಲ್ಲ.

ಸರ್ವೆ ನಂ 87 ರ ಒಟ್ಟು ನಾಲ್ಕು ಪೋಡುಗಳ ಜಮೀನುಗಳನ್ನು ಅಳತೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಅಳತೆ ಮಾಡಿದ್ದಾಗಿ ನುಡಿಯುತ್ತಾರೆ. ನಿಪಿ 5 ರಂತೆ ದಾವಾ ಆಸ್ತಿಯನ್ನು ಅಳತೆ ಮಾಡುವ ಕಾಲಕ್ಕೆ ಸರ್ವೆ ನಂ 87 ರ ಒಟ್ಟು ನಾಲ್ಕು ಪೋಡುಗಳ ಜಮೀನುಗಳನ್ನು ಅಳತೆ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ಒತ್ತುವರಿ ಮಾಡಿದ ಜಮೀನಿನ ಉದ್ದದ ಅಳತೆ ತೋರಿಸಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 87 ರ ಒಟ್ಟು ಪೋಡುಗಳನ್ನು ಅಳತೆ ಮಾಡಿದರೆ ಯಾವ ಜಮೀನು ಯಾರು ಒತ್ತುವರಿ ಮಾಡಿದ್ದಾರೆಂದು ಹೇಳಲು ಸಾಧ್ಯ ಎಂದರೆ ಸರಿ. ಖರೀದಿ ಪತ್ರದ ಆಧಾರದ ಮೇಲೆ ನಾನು ಅಳತೆ ಕಾರ್ಯ ಮಾಡಿಲ್ಲ. ಖರೀದಿ ಪತ್ರದಲ್ಲಿ ಕಾಣಿಸಿದ ಚೆಕ್ಕುಬಂದಿಗಳ ಆಧಾರದ ಮೇಲೆ ಅಳತೆ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಪಹಣಿ ಪತ್ರಿಕೆಗಳ ಆಧಾರದ ಮೇಲೆ ಮಾಡಿದ್ದಾಗಿ ನುಡಿಯುತ್ತಾರೆ. ಪಹಣಿ ಪತ್ರಿಕೆಯಲ್ಲಿ ಚೆಕ್ಕುಬಂದಿ ವಿವರ ಇರುವುದಿಲ್ಲ ಎಂದರೆ ಸರಿ. ವಾದಿಯ ಹೇಳಿಕೆಯ ಮೇರೆಗೆ ನಿಪಿ 5 ರ ದಾಖಲೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ ಅಳತೆ ಮಾಡಿದ ಆಸ್ತಿಯ ಗಡಿ ಗುರುತಿಸುವ ಕುರಿತು ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 6 ಕ್ಕೆ ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ 6 ಕ್ಕೆ ದಾವಾ ಆಸ್ತಿಯ ಅಕ್ಕ ಪಕ್ಕದ ಜಮೀನುದಾರರ ಸಹಿ ಮಾಡಿಲ್ಲ ಎಂದರೆ ಸರಿ. ಉದ್ದೇಶಪೂರ್ವಕವಾಗಿ ದಾವಾ ಆಸ್ತಿಯ ಅಕ್ಕ ಪಕ್ಕದ ಜಮೀನುದಾರರಿಗೆ ನೋಟೀಸ್ ಜಾರಿ ಮಾಡದೆ ಉದ್ದೇಶಪೂರ್ವಕವಾಗಿ ನಿಪಿ 5 ರ ದಾಖಲೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಸ್ಥಳಕ್ಕೆ ಹೋಗಿ ಯಾವುದೇ ಅಳತೆ ಕಾರ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಅಳತೆ ಮಾಡಲು ಸಲ್ಲಿಸಿದ ಅರ್ಜಿಯ ಜಮೀನು ಕುರಿತು ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೆ ಅಂತಹ ಜಮೀನನ್ನು ಅಳತೆ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯದಿಂದ ಆ ಕುರಿತು ಮನಾಯಿ ಆದೇಶ ಇದ್ದರೆ ಮಾತ್ರ ಮಾಡವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 5 ರ ನಕಾಶೆ ಏಕಪಕ್ಷೀಯವಾಗಿದೆ ಎಂದರೆ

ಸರಿಯಲ್ಲ. ಸರ್ವೆ ಮ್ಯಾನ್ಯುಯಲ್ ಪ್ರಕಾರ ದಾವಾ ಆಸ್ತಿಯ ಅಕ್ಕ ಪಕ್ಕದ ಜಮೀನುದಾರರಿಗೆ ಮುಂಚಿತ ನೋಟೀಸ್ ನೀಡದೆ ಮಾಡಿದ ಅಳತೆ ತಪ್ಪು ಎಂದರೆ ಸರಿಯಲ್ಲ. ಅಕ್ಕ ಪಕ್ಕದ ಜಮೀನಿನ ಮಾಲೀಕರುಗಳಿಗೆ ನೋಟೀಸ್ ಜಾರಿ ಮಾಡಿದ್ದರೆ ನಿಪಿ 5 ರಂತೆ ವರದಿ ನೀಡಲು ಆಗುವುದಿಲ್ಲ ಎಂಬ ಕಾರಣ ಉದ್ದೇಶಪೂರ್ವಕವಾಗಿ ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಂತೆ ಅಳತೆ ಮಾಡುವ ಕಾಲಕ್ಕೆ ನನ್ನ ಸಹಾಯಕ ನನ್ನೊಂದಿಗಿದ್ದು ಅವರ ಸಹಿಯನ್ನು ನಿಪಿ 6 ಕ್ಕೆ ಪಡೆದಿಲ್ಲ. ಸರ್ವೆ ಅಧಿನಿಯಮದ ಪ್ರಕಾರ ಅಳತೆ ಮಾಡದೇ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ವಾದಿಗೆ ಅನುಕೂಲ ಮಾಡಲು ನಿಪಿ 4 ರಿಂದ 6 ರ ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.